ಮಟ ಮಟ ಮದ್ಯಾಹ್ನದ ಬಿಸಿಲಿಗೆ ಕಣ್ಣುಗಳು ಉರಿಯುತ್ತಿವೆ. ಕಪ್ಪಾದ ಕೆಂಪಾದ ಬೊಟ್ಟುಗಳು ತಿರುಗುತ್ತಿವೆ.

ಗೇಟು ತೆರೆಯುವ ಶಬ್ದಕ್ಕೂ ಕಾಲಿಂಗ್‌ಬೆಲ್ಲಿನ ಅರಚಾಟಕ್ಕೂ ಅವಳನ್ನು ಎಬ್ಬಿಸಲಾಗಲಿಲ್ಲ.

ತೆರೆದುಕೊಂಡಿದ್ದ ಕಿಟಕಿಯ ಮುಂದೆ ಬಂದು ಗಂಡ ಕೇಳಿದ:

"ಅಲ್ಲ, ಇದೇನಿದು ಮಧ್ಯಾಹ್ನ ಮಲಗಿ ನಿದ್ರೆ ಮಾಡ್ತಿದಿಯಾ..."

ಪ್ರಶ್ನೆ ಪೂರ್ಣಗೊಳ್ಳುವುದಕ್ಕಿಂತ ಮೊದಲು ಆತ ಅವಳ ಮುಖವನ್ನು ನೋಡಿದ.

"ಒಂಟಿಯಾಗಿದ್ದರಿಂದ ಬೇಸರವಾಗಿರಬೇಕಲ್ಲವೆ, ನೀನು ಈವರೆಗೂ ನಿದ್ರೆ ಮಾಡಲೇ ಇಲ್ಲವೇ?..."

ಅವಳು ಬಾಗಿಲು ತೆರೆದಳು.

ಒಳಗೆ ಬಂದ ಆತ ಕೇಳಿದ:

"ಹೋಗೋದು ಬೇಡವೆ?"

"ಹೋಗೋಣ. ಸಮಯ ಹನ್ನೆರಡಾಯ್ತಾ?"

ಯಾರೂ ಯಾರನ್ನೂ ಕಾದುಕುಳಿತಿರುವುದಿಲ್ಲ. ಅವಳು ಸಾವಕಾಶವಾಗಿ ವೇಷವನ್ನು ಬದಲಿಸಿದಳು.

ಮಧ್ಯಾಹ್ನದ ಸೂರ್ಯನ ಕೆಳಗೆ ಗಂಡನೊಂದಿಗೆ ಆಟೊರಿಕ್ಷಾದಲ್ಲಿ ಕುಳಿತುಕೊಳ್ಳುವಾಗ, ಹಸಿವಿನ ಬಗೆಗಿನ ಆಲೋಚನೆಗಳನ್ನು ತಡೆಯಬಯಸಿದಳು.

ಅಂಗಳಕ್ಕಿಳಿದು ಬಂದರು. ಸ್ನೇಹಿತ ಮತ್ತವನ ಹೆಂಡತಿ.

ಫ್ಲ್ಯಾಟಿನ ಕೆಳಹಂತಸ್ತಿನಲ್ಲಿ ಅವರ ವಾಸ. ಹದಿನಾರು ಕುಟುಂಬಗಳು, ಹದಿನಾರು ರೀತಿಯಲ್ಲಿ ಒಂದೆ ಕಟ್ಟಡದಲ್ಲಿ ಜೀವನ ನಡೆಸುತ್ತಿದ್ದಾರೆ. ಅವರೆಲ್ಲರೂ ಒಂದೆ ಕುಟುಂಬದಂತೆ ಜೀವನ ಸಾಗಿಸುವಂತಿದ್ದರೆ...

ಏಕಾಂತಮಯವಾದ ತೆಂಗಿನ ತೋಪಿನಲ್ಲಿ ಹೊಂಚುಹಾಕಿ ಕಾದಿದ್ದ ಕಪ್ಪು ನೆರಳುಗಳ ಹರಿತವನ್ನು ಅನುಭವಿಸಬೇಕಾಗುತ್ತಿರಲಿಲ್ಲ.

ಸ್ನೇಹಿತನ ಹೆಂಡತಿ ಹೇಳಿದಳು:

"ನಿಮ್ಮ ಮನೆ ಎಷ್ಟೊಂದು ಚೆನ್ನಾಗಿದೆಯಲ್ಲ."

"ಎಷ್ಟೊಂದು ಕೋಣೆಗಳಿವೆ!"

"ನಿಮಗೊಂದು ಗ್ಯಾಸಿನ ಒಲೆ ಇದ್ದುಬಿಟ್ಟರಂತೂ ನೀವು ಪರಿಪೂರ್ಣ ಅದೃಷ್ಟಶಾಲಿಗಳು!"

ಗ್ಯಾಸ್ ಒಲೆಯೊಂದಿಗೆ ವಾಸಿಸುವ ಅದೃಷ್ಟ ತನಗೆ ವಿಧಿಸಲ್ಪಟ್ಟಿಲ್ಲವೇನೊ ಎಂದು ಶ್ಯಾಮಲೆ ಯೋಚಿಸಿದಳು. ಮೂರೊ ನಾಲ್ಕೊ ಸಾವಿರ ರೂಪಾಯಿಗಳಿಂದ ಸಿಗುವಂತಹ ಅದೃಷ್ಟ!

ಮನುಷ್ಯ ಧ್ವನಿಗಳಿಂದಲೇ ತುಂಬಿಕೊಂಡಿದ್ದ ಆ ಕಟ್ಟಡದಿಂದ ಸಂಜೆ ಹೊರಗಿಳಿಯಲು ಅವಳಿಗೆ ಭಯವಾಯಿತು.

ಕಡಲಿಗೆ ಅಭಿಮುಖವಾಗಿರುವ ಬೀದಿಗಳ ಪಶ್ಚಿಮದೆಡೆಗೆ ನಡೆಯುವಾಗ ಕಾಗೆಗಳು ಯುದ್ಧದ ಸೈನಿಕರ ಸಾಲುಗಳಂತೆ ಬಂದು ತನ್ನನ್ನು ಎದುರಿಸಿದವು. ಬೀದಿಯಲ್ಲಿ ಬಿದ್ದುಕೊಂಡಿದ್ದ ಕಲ್ಲುಗಳನ್ನುನೋಡಿಕೊಂಡು ಅವಳು ನಡೆದಳು.

ಗೇಟಿನ ಬೀಗ ತೆಗೆಯುವಾಗ ಗಂಡ ಹೇಳಿದ:

"ಈಗಲೆ ಮನೆಗೆ ಹೋಗಿ ಮಾಡೋದಕ್ಕಾದರೂ ಏನಿದೆ?... ನಾವು ಬೀಚಿಗೆ ಹೋಗಿ ಸ್ವಲ್ಪ ಹೊತ್ತು ಕೂರೋಣ."